# ಶರಣರ ಭಕ್ತ ಭವಿ ಪರಿಕಲ್ಪನೆಯ ವಿಶ್ಲೇಷಣೆ

**ಮಹದೇವಪ್ರಸಾದ್ ಎನ್.ಎಸ್.**

ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನಂಜನಗೂಡು, ಮೈಸೂರು ಜಿಲ್ಲೆ.

DOI: https://doi.org/10.5281/zenodo.22899883

**ABSTRACT:**

ಈ ಸಂಶೋಧನಾ ಲೇಖನವು ಶರಣರ ವಚನಗಳಲ್ಲಿ ವ್ಯಕ್ತವಾಗುವ 'ಭವಿ–ಭಕ್ತ' ಪರಿಕಲ್ಪನೆಯನ್ನು ತಾತ್ವಿಕ ಹಾಗೂ ಅನುಭಾವಿಕ ನೆಲೆಯಲ್ಲಿ ವಿಶ್ಲೇಷಿಸುತ್ತದೆ. 'ಭವಿ' ಎಂಬ ಪದಕ್ಕೆ ಕೇವಲ ಲಿಂಗಧಾರಣೆ ಇಲ್ಲದ ವ್ಯಕ್ತಿ ಎಂಬ ಸೀಮಿತ ಅರ್ಥವಲ್ಲದೆ, ಚಲನೆಯಿಲ್ಲದ ಅಸ್ತಿತ್ವ, ಆತ್ಮಸ್ವರೂಪದ ಅರಿವಿಲ್ಲದ ಸ್ಥಿತಿ ಹಾಗೂ ಕಾಮ, ಕ್ರೋಧ, ಲೋಭ, ಮೋಹಾದಿ ಮಾನವೀಯ ಗುಣಗಳ ಸಂಕೇತವೆಂಬ ವಿಸ್ತೃತ ಅರ್ಥಗಳಿರುವುದನ್ನು ಲೇಖನ ಗುರುತಿಸುತ್ತದೆ. ಭಕ್ತನ ಸಾಧನೆಯಲ್ಲಿ ಭವಿ–ಭಕ್ತರ ನಡುವಿನ ಸಂಬಂಧ, ದೇವಾರಾಧನೆ ಮತ್ತು ಲಿಂಗಾರಾಧನೆಯ ವ್ಯತ್ಯಾಸ, ಪ್ರಸಾದ ತತ್ತ್ವ ಹಾಗೂ ಸಮರಸದ ಪರಿಕಲ್ಪನೆಗಳನ್ನು ಪರಿಶೀಲಿಸಲಾಗಿದೆ. ಶರಣರ ದೃಷ್ಟಿಯಲ್ಲಿ ಭಕ್ತನು ಅಂತಿಮವಾಗಿ ಭವಿತ್ವವನ್ನು ಮೀರಿ ಲಿಂಗಚೇತನದೊಂದಿಗೆ ಏಕೀಭವಿಸುವ ಸಾಧನೆಯೇ ನಿಜವಾದ ಭಕ್ತಿಯೆಂಬ ತಾತ್ವಿಕ ಆಶಯವನ್ನು ಲೇಖನ ಪ್ರತಿಪಾದಿಸುತ್ತದೆ.

**KEYWORDS:**

ಶರಣರು, ವಚನ ಸಾಹಿತ್ಯ, ಭವಿ–ಭಕ್ತ ಪರಿಕಲ್ಪನೆ, ಲಿಂಗಾಯತ ಧರ್ಮ, ಇಷ್ಟಲಿಂಗ, ಭಕ್ತಿ ತತ್ತ್ವ .

ಕನ್ನಡದ ಶರಣರು ಸಾಮಾಜಿಕ ಸುಧಾರಣೆಯ ಜೊತೆಗೆ ಧಾರ್ಮಿಕ ಸುಧಾರಣೆಯನ್ನೂ ಕೈಗೊಂಡರು ಎಂಬುದು ಮಹತ್ತರವಾದುದು. ಧಾರ್ಮಿಕ ತತ್ವಗಳನ್ನು ರೂಪಿಸಿದ ಶರಣರು ಹಲವಾರು ತಾತ್ವಿಕ ಪರಿಕಲ್ಪನೆ ಮತ್ತು ಚಿಂತನೆಗಳನ್ನು ಸಹ ಕಟ್ಟಿಕೊಟ್ಟರು. ಕಾವ್ಯಾತ್ಮಕವಾದ ವಚನಗಳ ಅಂತರಂಗದಲ್ಲಿ ನುಡಿಯ ವಿಶಿಷ್ಟತೆ ಮತ್ತು ತತ್ವಚಿಂತನೆಗಳ ಹೂರಣ ಎರಡೂ ಬೆರೆತು ವಚನಗಳಿಗೆ ಎತ್ತರದ ನೆಲೆಯನ್ನು ಒದಗಿಸಿವೆ. ಶರಣರು ಕನ್ನಡ ಶಬ್ದಗಳನ್ನು ಕಾವ್ಯಾತ್ಮಕವಾಗಿ ಬಳಸಿ ಭಾಷೆಗೆ ಪಾವಿತ್ರತೆಯನ್ನು ನೀಡಿದ ವಚನಗಳಲ್ಲಿ ಇದು ಸಹ ಒಂದು:

**"ಭವಿಗೆ ಭವವಿಲ್ಲ, ಭಕ್ತಂಗೆ ಭವಿಯನೊಲ್ಲೆನೆಂಬುದು ದುರಾಚಾರ.**
**ದೇವಾರಾಧನೆಯ ಫಲವುಳ್ಳನ್ನಕ್ಕರ ಭಕ್ತರೆಂದೆ,**
**ಲಿಂಗಾರಾಧನೆಯ ಫಲವುಳ್ಳನ್ನಕ್ಕರ ಭಕ್ತರೆ ?**
**ಭವಿಗೆ ಮಾಡುವ ಪದಾರ್ಥವನತಿ ಸುಯಿದಾನದಲ್ಲಿ ಮಾಡಬೇಕು.**
**ಭಕ್ತ ಕಂಡಡೆ ಮುಟ್ಟಪಡವಾಯಿತಾಗಿ ಇದು ಕಾರಣ**
**ಕೂಡಲಚೆನ್ನಸಂಗಯ್ಯ, ಭಕ್ತನಾಗಿ ಭವಿಯಾಗಿರ್ದಡೆ**
**ಅವರನೆಂತು ಭಕ್ತರೆಂಬೆ ?"**

**ಭವಿಗೆ ಭವವಿಲ್ಲ, ಭಕ್ತಂಗೆ ಭವಿಯನೊಲ್ಲೆನೆಂಬುದು ದುರಾಚಾರ:**

ಭವಿ ಎನ್ನುವ ತಾತ್ವಿಕ ಶಬ್ದಾರ್ಥವನ್ನು ತಿಳಿಯದೆ ಹೋದರೆ ಇಂತಹ ಬೆಡಗಿನ ವಚನಗಳಿಗೆ ಅರ್ಥ ನೀಡುವುದು ಕಷ್ಟಕರವಾಗುತ್ತದೆ. ಸಾಮಾನ್ಯ ತಿಳುವಳಿಕೆಯಲ್ಲಿ ಭವಿ ಎಂದರೆ ಅಂಗಕ್ಕೆ ಲಿಂಗಧಾರಣೆ ಇಲ್ಲದವನು ಎಂದಾದರೆ, ಇನ್ನೊಂದು ವಿಶಾಲಾರ್ಥದಲ್ಲಿ ಅವಗುಣಗಳನ್ನು ಹೊಂದಿ ಮನುಕುಲಕ್ಕೆ, ಇಡೀ ಪ್ರಕೃತಿಗೆ ಮಾರಕವಾಗುವ ಗುಣವುಳ್ಳವನು ಎಂದೂ ಸಹ ಅರ್ಥೈಸುವುದುಂಟು. ಇದು ಭವಿಯ ಭಾಗಶಃ ವಿವರಣೆಯಾಗುತ್ತದೆ. ವಚನಗಳಲ್ಲಿ ಬರುವ ಭವಿಯ ಅರ್ಥಗಳನ್ನು ಅವಲೋಕಿಸಿದಾಗ ಒಂದಿಷ್ಟು ಭಿನ್ನವಾದ ಹೆಚ್ಚು ವಿಸ್ತಾರವಾದ ಶಬ್ದ ಭವಿ ಎನಿಸುತ್ತದೆ. "ಭವಿ" ಎನ್ನುವ ಶಬ್ದಕ್ಕೆ ವಚನಗಳಲ್ಲಿ ಸಿಗುವಂತೆ "ಅಸ್ತಿತ್ವವಿದ್ದು ಚಲನೆ ಇಲ್ಲದವನು" ಎನ್ನುವ ವಿಶಾಲಾರ್ಥದಲ್ಲಿ ಕಾಣಬರುತ್ತದೆ. ಇದನ್ನು ಆಂಗ್ಲ ಭಾಷೆಯಲ್ಲಿ 'mundane existence' ಎಂದು ಕರೆಯುವುದುಂಟು. ಹೀಗಾಗಿ ಭವಿ ಎನ್ನುವುದನ್ನು ಮೂರು ಭಾಗಗಳಾಗಿ ಅರ್ಥ ಮಾಡಬಹುದು.

**ಒಂದು:**

ಮಾನವ ಶಿವನ ಸ್ವರೂಪವಾದರೂ ತನ್ನ ಸ್ವರೂಪದ ಅರಿವು ಹೊಂದದೆ, ಸ್ವರೂಪ ದರ್ಶನಕ್ಕೆ ಅಗತ್ಯವಾದ ಕಾಯಕ್ಕೆ ಇಷ್ಟಲಿಂಗವನ್ನು ಪಡೆಯದೆ ಇರುವವರಿಗೆ ಭವಿ ಎನ್ನುವ ಅರ್ಥ ವಚನಗಳಲ್ಲಿ ಇದೆ. ಈ ರೀತಿ ಇದ್ದಾಗ ಆ ವ್ಯಕ್ತಿ ಅವಗುಣಗಳ

ಕಣಜವೇ ಆಗಿರುತ್ತಾನೆ. ವ್ಯಕ್ತಿಯ ಕೈಕಾಲು, ಇತರ ಅಂಗಗಳು ಚಲಿಸುತ್ತಿದ್ದರೂ ಅಂತರಂಗದ ನಿರಾಕಾರ ಸ್ವರೂಪನಾದ ಜೀವಾತ್ಮನಿಗೆ ಚಲನೆ ಇಲ್ಲದಾಗಿರುತ್ತದೆ. ಇದರಿಂದ ವ್ಯಕ್ತಿಗೆ ತನ್ನ ಇರುವಿಕೆಯ ವ್ಯಾಪ್ತಿ ತಿಳಿಯದೆ "ನಾನು ಕೇವಲ ದೇಹಿ" ಎಂಬ ಭಾವದಲ್ಲಿ ಇರುತ್ತಾನೆ. ದೇಹದ ಅಸ್ತಿತ್ವಕ್ಕೆ ಅದರ ಪೋಷಣೆಗಾಗಿ ಎಲ್ಲ ತರಹದ ಅನ್ಯಾಯ ಅಸಡ್ಡೆಯ ಕಾರ್ಯ ಮಾಡುವ ಗುಣ ಉಳ್ಳವನಾಗಿ ಭವಿ ಎನಿಸಿಕೊಳ್ಳುತ್ತಾನೆ.

**ಎರಡು: ಅಂಗ ಭಕ್ತನಾಗಿ, ಮನ ಭವಿಯಾಗಿರುವ ಸ್ಥಿತಿ:**

ಶರಣರ ನುಡಿಗಳಂತೆ ಬದುಕುವ ಆಶಯ ಹೊಂದಿದ ವ್ಯಕ್ತಿ ಇಷ್ಟಲಿಂಗ ಧಾರಕನಾಗಿ ಕಾಯಾ ಗುಣಗಳ ಬಗ್ಗೆ ಎಚ್ಚರದಿಂದ ಇದ್ದು, ಬದುಕು ಸಾಗಿಸುತ್ತಿರುತ್ತಾನೆ. ಆತನ ಬಾಹ್ಯ ನಡೆ ನುಡಿ, ಆಚರಣೆ ಸ್ವಭಾವ ಎಲ್ಲವೂ ಶುದ್ಧವಾಗಿ ಇರುತ್ತವೆ. ಆದರೆ ಮನದ ಯಾವುದೋ ಮೂಲೆಯಲ್ಲಿ ನನ್ನದು ಇಂತಹ ಜಾತಿ, ಇಂತಹ ಉಪಜಾತಿ, ನಾನು ಅದಕ್ಕೆ ಸೇರಿದವನು ಎನ್ನುವ ಭಾವ ಇರುತ್ತದೆ. ಈ ಭಾವ ಅಖಂಡ ಪರವಸ್ತುವನ್ನು ಸೇರಲು ಅಡ್ಡಿಯಾಗುತ್ತದೆ. ಹೀಗಾಗಿ ಬಸವಣ್ಣನವರು ಇಂತಹ ಸ್ವಭಾವ ಹೊಂದಿದವರು "ತನು ಭಕ್ತನಾಗಿದ್ದು ಮನ ಭವಿಯಾಗಿದೆ" ಎನ್ನುತ್ತಾರೆ. ಇಂಥವರ ಪೂಜೆ ಪ್ರಾಯಶ್ಚಿತ್ತ ಎಂತಲೂ ವಿಡಂಬಿಸುತ್ತಾರೆ. ಹಾಗಾಗಿ ಒಳಗಿನ ವಿಭಜನೆಯ ಭಾವದ ಗುಣಗಳು ಸಹ ಭವಿಗಳೇ.

ಇನ್ನು ಅಂಗದೊಳಗೆ ಅವ್ಯಕ್ತವಾಗಿರುವ ತನುಗುಣಗಳು, ಮನಗುಣಗಳು, ಪ್ರಾಣಗುಣಗಳು, ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ ಇತ್ಯಾದಿಗಳು ಸಹ ಶಿವಚೇತನದ ಆಧಾರದ ಮೇಲೆ ನಡೆಯುವ ಕಾಯದಲ್ಲಿ ಇದ್ದರೂ ಅವುಗಳು ಭವಿ ಎನ್ನುತ್ತಾರೆ. ಅವುಗಳಿಗೆ ಭವಿಯ ಹಿಡಿದ ಭವಿಗಳು ಎನ್ನುತ್ತಾರೆ ಅಲ್ಲಮಪ್ರಭು. ಇಲ್ಲಿ ಅವುಗಳಿಗೆ ಭವಿ ಎನ್ನುವ ಕಾರಣವೇನೆಂದರೆ ಆ ಗುಣಗಳು ಕೇವಲ ಏಕಮುಖ ಚಲನೆ ಹೊಂದಿರುವುದು. "ಕಾಮ" ಇದು ಮಾನವನ ಬಯಕೆಯ ಗುಣ, ಇದು ಕೇವಲ ಬಾಹ್ಯ ವಸ್ತುಗಳನ್ನೇ ಬಯಸುತ್ತಿರುತ್ತದೆ. ಇದಕ್ಕೆ ಲಿಂಗ ಬೇಕು (ಬೆಳಕನ್ನು ನೋಡಬೇಕು) ಎನ್ನುವ ಬಯಕೆ ಉಂಟಾಗದು, ಏಕೆಂದರೆ ಆ ಚಲನೆಗೆ ಆಧಾರವಾದ ಬೆಳಕನ್ನು ಅವು ನೋಡಿಲ್ಲದಿರುವ ಕಾರಣ. ಹೀಗೆ ಮಾನವಸಹಜ ಗುಣಗಳೆಲ್ಲ ಭವಿ ಎಂದು ಕರೆಸಿಕೊಳ್ಳುತ್ತವೆ. ಭವಿಗೆ ಭವವಿಲ್ಲ ಎಂದರೆ ಚಲನೆಯಿಲ್ಲದ ದೇವಸ್ವರೂಪಕ್ಕೆ ಭವವಿಲ್ಲ" ಎನ್ನುವ ಅರ್ಥವಿದೆ.

**ಮೂರು: ಪರವಸ್ತು ಭವಿ**

ಸೃಷ್ಟಿಯ ರಚನೆಗೆ ಕಾರಣವಾದ ಪರವಸ್ತು ಪ್ರಸನ್ನತೆಯ ಸ್ವರೂಪ, ಆ ಪರವಸ್ತು ಪ್ರಕೃತಿಯನ್ನು ರಚಿಸಲು ನಾಲ್ಕು ಅವಸ್ಥೆಗಳನ್ನು ಹೊಂದಿದೆ. ಅವುಗಳೇ ಗುರು, ಲಿಂಗ, ಜಂಗಮ, ಪ್ರಸಾದ ಎನ್ನುವ ತತ್ವಗಳು. ಆ ಪ್ರಸಾದವನ್ನು ಬಿತ್ತಿ ಬೆಳೆದು

ಭಕ್ತನ ಕಾಯದಲ್ಲಿ ಉಣ್ಣಲು ಉಳಿದ ಜೀವಿಗಳ ಜೊತೆಗೆ ಮಾನವನನ್ನು ರಚಿಸಿದ. ಪ್ರಸನ್ನವಾದ ಪ್ರಸಾದವನ್ನು ಹೊಂದಿ ಚಲಿಸದೆ ಎಷ್ಟೋ ವರ್ಷ ಕಾಲ ಪರಶಿವ ಹಾಗೆಯೇ ಚಲಿಸದೆ ಇದ್ದ, ಈ ಚಲಿಸದೆ ಇರುವ ಸ್ಥಿತಿ ಶರಣರಿಂದ "ಭವಿ" ಎಂದು ಕರೆಯಲ್ಪಟ್ಟಿದೆ. ನಂತರ ಸೃಷ್ಟಿಯ ರಚನೆಗಾಗಿ ಚಲಿಸಲು ನಿರ್ಧರಿಸಿದ.

**ಭಕ್ತಂಗೆ ಭವಿಯನೊಲ್ಲೆನೆಂಬುದು ದುರಾಚಾರ**

ಭಕ್ತನಾಗಲು "ಭವಿ" ಅಂದರೆ ಚಲನೆಯಿಲ್ಲದ ದೇವ ಸ್ವರೂಪದ ಸಹಾಯ ಅಗತ್ಯವಿದೆ. ಅಂತಹ ದೇವ ಸ್ವರೂಪವನ್ನು (ಭವಿ) ಒಲ್ಲೆನೆಂಬುದು ಕೆಟ್ಟ ಆಚಾರ. ಭಕ್ತನಾಗಲು ಭವಿಯ (ದೇವನ) ಸಹಾಯ ಬೇಕು ಎನ್ನುವುದು ಈ ಸಾಲಿನ ಅರ್ಥ.

**'ದೇವಾರಾಧನೆಯ ಫಲವುಳ್ಳನ್ನಕ್ಕರ ಭಕ್ತರೆಂದೆ,**

**ಲಿಂಗಾರಾಧನೆಯ ಫಲವುಳ್ಳನ್ನಕ್ಕರ ಭಕ್ತರೆ?'**

ಈ ಎರಡು ಸಾಲುಗಳು ಶರಣರು ಪ್ರತಿಪಾದಿಸಿದ ಭಕ್ತಿ ತತ್ವಕ್ಕೋ ಅವರ ಹಿಂದಿನ ತತ್ವಶಾಸ್ತ್ರಗಳು ತಿಳಿಸಿದ ಭಕ್ತಿ ತತ್ವಕ್ಕೋ ವಿವರಣೆ ನೀಡುತ್ತವೆ. ಈ ಸಾಲುಗಳ ಅರ್ಥ ತಿಳಿಯಲು "ದೇವಾರಾಧನೆ" ಮತ್ತು "ಲಿಂಗಾರಾಧನೆ" ಮಧ್ಯದ ವ್ಯತ್ಯಾಸ ತಿಳಿಯುವ ಅಗತ್ಯವಿದೆ. ದೇವಾರಾಧನೆ ಎಂದರೆ ದೇವರನ್ನು ಇದಿರಿಟ್ಟು ಮಾಡುವ ಭಕ್ತಿ. ಈ ಆರಾಧನೆಗೆ ಫಲಾಫಲಗಳುಂಟು. ಆ ಆರಾಧನೆಯ ಫಲಗಳನ್ನು ಉಣ್ಣುವಾತನು ಭಕ್ತ ಎನಿಸಿಕೊಳ್ಳುತ್ತಾನೆ. ಲಿಂಗಾರಾಧನೆಯ ಫಲಗಳೆಂದರೆ ಆ ಲಿಂಗಗಳೇ ತಾನಾಗುವುದು. ಆ ಲಿಂಗದ ಆರಾಧನೆ ಎಂದರೆ ಆ ಬೆಳಗಿನಡಿ ಕ್ರಿಯೆಮಾಡಿ ಪಾದೋದಕ ಪ್ರಸಾದ ಕೊಳ್ಳುವುದು. ಇದು ಲಿಂಗದೊಡನೆ ಸಹಭೋಜನ. ಇಂಥವರಿಗೆ ಭಕ್ತ ಎನ್ನಲು ಸಾಧ್ಯವೇ? ಎಂದು ಪ್ರಶ್ನಿಸುತ್ತಾರೆ. ಅವರು ಸ್ವಯಂ ಲಿಂಗವಾಗಿರುತ್ತಾರೆ.

**"ಭವಿಗೆ ಮಾಡುವ ಪದಾರ್ಥವನತಿ ಸುಯಿದಾನದಲ್ಲಿ ಮಾಡಬೇಕು. ಭಕ್ತ ಕಂಡಡೆ ಮುಟ್ಟಪಡವಾಯಿತಾಗಿ"**

ಇಲ್ಲಿ ಭವಿ ಎಂದರೆ ಪರವಸ್ತು. ಆತನು ಪ್ರತಿಮಾನವನ ಆಂತರ್ಯದಲ್ಲಿ ಚಲನೆ ಇಲ್ಲದೆ ಇರುವ ಕಾರಣಕ್ಕೆ ಆತನು 'ಭವಿ" ಎನಿಸಿಕೊಳ್ಳುತ್ತಾನೆ. ಆತನನ್ನು ಲಿಂಗಾರಾಧನೆಯ ಮೂಲಕ ಚಲಿಸುವಂತೆ ಮಾಡಲು ಆತನಿಗೆ "ಭಕ್ತ" ತನ್ನ ಕ್ರಿಯಾಪ್ರಸಾದವನ್ನು ಅತೀ ಎಚ್ಚರಿಕೆಯಿಂದ ಅರ್ಪಿಸಬೇಕೆಂಬುದೇ ಈ ಸಾಲುಗಳ ಅರ್ಥ. ಈ ಪ್ರಸಾದ ಪಡೆಯುವಲ್ಲಿ ಆತನು ಗುರುವಾಗಿ, ಲಿಂಗವಾಗಿ, ಜಂಗಮವಾಗಿ, ಪ್ರಸಾದವಾಗಿ ಚಲಿಸುತ್ತಾನೆ. ಈ ಪ್ರಕ್ರಿಯೆಯಲ್ಲಿ ಸುಯಿದಾನ ಅಂದರೆ ಎಚ್ಚರ ಅಗತ್ಯ. ಈ ಎಚ್ಚರ ತಪ್ಪಿದರೆ ಮತ್ತೆ ದೇವಾರಾಧನೆ ಮೂಲಕ ಖಂಡಿತ ಭಾವದಲ್ಲಿ, ಕೊಡುವವ, ಪಡೆಯುವವ ಎಂಬ ಭೇದ ಉಂಟಾದರೆ ಅಲ್ಲಿ ದೇವರು ಮತ್ತು ಭಕ್ತನೆಂಬ ಭೇದ

ಬಂದಂತಾಗುತ್ತದೆ. ಸಮರಸ ಸಾಧ್ಯವಾಗುವುದಿಲ್ಲ.

**"ಇದು ಕಾರಣ**
**ಕೂಡಲಚೆನ್ನಸಂಗಯ್ಯ, ಭಕ್ತನಾಗಿ ಭವಿಯಾಗಿರ್ದಡೆ**
**ಅವರನೆಂತು ಭಕ್ತರೆಂಬೆ ?"**

ಈ ಸಾಲುಗಳ ಅರ್ಥ ಅತ್ಯಂತ ಮಾರ್ಮಿಕ. ಭಕ್ತನಾಗಿ ಎಚ್ಚರದಿಂದ ಅರ್ಪಿಸಿ ತಾನು ಅಚಲನಾಗಬೇಕು (ಭವಿ). ಸಾಧಕ ಲಿಂಗಚೇತನವನ್ನು ತನ್ನಲ್ಲಿ ಅವಗ್ರಹಿಸಿಕೊಂಡು ಭಕ್ತ(ಚಲನಶೀಲತೆ)ನಾಗಿ ಮತ್ತೆ ಲಿಂಗದಲ್ಲಿ ಅಡಗಿ ಭವಿ ಅಂದರೆ ಅಚಲ ಎನಿಸಿಕೊಳ್ಳುತ್ತಾನೆ. ಇದೇ ಮಾಡಬೇಕಾದ ಸಾಧನೆ. ಹಾಗಾಗಿ ಭಕ್ತನಾಗಿ ಭವಿಯಾಗದಿದ್ದರೆ ಅವರನೆಂತು ಭಕ್ತರೆಂಬೆ ಎಂದು ಪ್ರಶ್ನೆ ಮಾಡುವುದರ ಮೂಲಕ ಅಂತಿಮವಾಗಿ "ಭವಿ"ಯಾದ ಪರವಸ್ತುವನ್ನು ಕೂಡಲು, ತಾನೇ ಲಿಂಗವಾಗಲು, ಭಕ್ತನು "ಭವಿ" ಆಗಬೇಕಾದ ಅನಿವಾರ್ಯತೆಯನ್ನು ಈ ವಚನದಲ್ಲಿ ತಿಳಿಸುತ್ತಾರೆ.

**ಕಂಡ ಭಕ್ತರಿಗೆ ಕೈ ಮುಗಿಯುವಾತನೆ ಭಕ್ತ**
**ಮೃದುವಚನವೆ ಸಕಲ ಜಪಂಗಳಯ್ಯ**
**ಮೃದುವಚನವೆ ಸಕಲ ತಪಂಗಳಯ್ಯ**
**ಸದುವಿನಯವೆ ಸದಾಶಿವನ ಒಲುಮೆಯಯ್ಯ**
**ಕೂಡಲಸಂಗಮನಂತಲ್ಲದೊಡೆನೊಲ್ಲನಯ್ಯ.**

ಮಹಾ ಮಾನವತಾವಾದಿ ಬಸವಣ್ಣನವರ ಈ ವಚನದಲ್ಲಿ ಭಕ್ತನ ಆಚಾರವನ್ನು ಅತ್ಯಂತ ಸರಳವಾಗಿ ತಿಳಿಸಲಾಗಿದೆ. ಭಕ್ತ ಎಂದರೆ ಯಾರು? ಭಕ್ತನ ಸಹಜವಾದ ವರ್ತನೆ ಹೇಗಿರಬೇಕು? ಎನ್ನುವುದರ ವಿಚಾರವನ್ನು ಕುರಿತು ಈ ವಚನ ನಮಗೆ ಬೆಳಕು ಚೆಲ್ಲುತ್ತದೆ. ಭಕ್ತನ ಮಾತುಗಾರಿಕೆ ಮೃದು ವಚನದಿಂದ ಕೂಡಿರಬೇಕು, ನುಡಿದರೆ ಮುತ್ತಿನಹಾರದಂತಿರಬೇಕು. ಇಂತಹ ನಡೆ ನುಡಿಯ ಮೃದು ವಚನಗಳು ಸಕಲ ಜಪ, ತಪಗಳಿಗೆ ಸಮ ಎಂದು ಹೇಳಿದ್ದಾರೆ. ಜಪ, ತಪಸ್ಸಿನಿಂದ ಗಳಿಸಬಹುದಾದ ಸಿದ್ಧಿಯನ್ನು ನಡೆ ನುಡಿ ಒಂದಾದ ಮೃದು ವಚನಗಳಿಂದ ಸಾಧಿಸಬಹುದು ಎನ್ನುವ ಸದು ವಿನಯವೆ ಸದಾಶಿವನ ಒಲುಮೆ ಎನ್ನುವಲ್ಲಿ ಭಕ್ತನ ಸದ್ಗುಣ, ವಿನಯಶೀಲತೆ ಗುಣಗಳನ್ನು ದೇವರು ಕೂಡ ಮೆಚ್ಚಬಲ್ಲ. ದೇವರ ಒಲುಮೆಯನ್ನು ಗಳಿಸಬೇಕಾದರೆ ಭಕ್ತನ ಸಾತ್ವಿಕ ವಿನಯಶೀಲತೆ ಬೇಕು.

ಇಂತಹ ಗುಣಗಳಿದ್ದರೆ ಮಾತ್ರ ಕೂಡಲಸಂಗಮ ದೇವನು ಒಲಿಯುತ್ತಾನೆ. ದೇವರ ಒಲುಮೆ ಬಯಸುವವನು ಈ ಭಕ್ತನ ಗುಣಗಳನ್ನು ಹೊಂದಿರಬೇಕು ಎಂದು ನಿಜ ಭಕ್ತನ ಸ್ವರೂಪ ಲಕ್ಷಣಗಳನ್ನು ತಿಳಿಸಿ ಇಂಥವರು ಭಕ್ತರಾದರೆ ಉಳಿದವರು ಭವಿಗಳು, ಶರಣರ ದೃಷ್ಟಿಯಲ್ಲಿ ಇವು ಎರಡೇ ಕುಲಗಳು.

## ಪರಾಮರ್ಶನ ಕೃತಿಗಳು:


1. ವೀರಣ್ಣ ರಾಜೂರ (ಸಂ), (2021), ಬಸವಣ್ಣನವರ ವಚನ ಸಂಪುಟ 1, ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರ.
2. ಪೂಜ್ಯಶ್ರೀ ಕಮಲಕ್ಕನವರು (ಸಂ), (ವರ್ಷ ಲಭ್ಯವಿಲ್ಲ ), ಬಸವಣ್ಣನವರ ಲಿಂಗಾಯತ ಧರ್ಮ, ತುರಗನೂರು: ಗುರುಬಸವಣ್ಣ ಯೋಗ ಕಮ್ಮಟ.
3. ಬಸವರಾಜು ಎಲ್. , (2014), ಅಲ್ಲಮನ ವಚನ ಚಂದ್ರಿಕೆ, ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ.
4. ತಿಪ್ಪೇರುದ್ರಸ್ವಾಮಿ ಎಚ್., (1997), ವಚನಗಳಲ್ಲಿ ವೀರಶೈವ ಧರ್ಮ, ಮೈಸೂರು: ಡಿ.ವಿ.ಕೆ. ಮೂರ್ತಿ.
5. ಶ್ರೀ ಬಸವಾನಂದ ಸ್ವಾಮಿಗಳು, (2009), ಆರೋಗ್ಯಮೃತ, ಧಾರವಾಡ: ಪ್ರಭುದೇವ ಪ್ರಕಾಶನ.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.